<u>ದಿನಾಂಕಃ 06-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಪಿ.ಎಸ್.ಸಿ. ವಕೀಲರಿಂದಃ</u>

1. ನಿಮಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ಸಾಕ್ಷಿ ನನ್ನ ತಂದೆಗೆ ನಾನು ಒಬ್ಬನೇ ಮಗ ಇದ್ದು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನಗೆ ಇಬ್ಬರು ಸಹೋದರಿಯರಿದ್ದು, ಅವರಲ್ಲಿ ಅಕ್ಕ ತೀರಿಕೊಂಡಿರುತ್ತಾಳೆ, ತಂಗಿಯ ಹೆಸರು ಮಲ್ಲಮ್ಮ, ಅಕ್ಕನ ಹೆಸರು ಅನ್ನಪೂರ್ಣಮ್ಮ ಎಂದು ನುಡಿಯುತ್ತಾರೆ. ಸುಮಾರು 9 ವರ್ಷಗಳ ಹಿಂದೆ ನನ್ನ ಸಹೋದರಿ ಮಲ್ಲಮ್ಮ ಹಾಗೂ ಅನ್ನಪೂರ್ಣಮ್ಮರವರ ವಾರಸುದಾರರು ನನ್ನ ವಿರುದ್ಧ ರಾಣೆಬೆನ್ನೂರಿನ ಪ್ರಿನ್ಸಿಪಲ್ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓ ಎಸ ನಂಬರ 93/2015 ನಂತೆ ವಾಟ್ನಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನೂ ಸಹಾ ಪಾರ್ಟಿ ಇದ್ದು, ವಕೀಲರ ಮುಖಾಂತರ ಹಾಜರಾಗಿದ್ದೆ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಗಳ ಮೇಲೆಯೇ ನನ್ನ ಸಹೋದರಿಯರು ಓ ಎಸ ನಂಬರ 93/2015 ನಲ್ಲಿ ಹಿಸ್ಸೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಈ ಪ್ರಕರಣದಲ್ಲಿರುವ ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ-6 ಧಾರವಾಡದಲ್ಲಿಯ ಮನೆಯನ್ನು ಬಿಟ್ಟು ಉಳಿದ ಆಸ್ತಿಗಳ ಮೇಲೆ 93/2015 ದಾವೆಯನ್ನು ಹಾಕಿದ್ದರು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿದ್ದು, ನನಗೆ 1/3 ಹಿಸ್ಸೆ ಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ಉಳಿದ 2/3 ಹಿಸ್ಸೆಯನ್ನು ನನ್ನ ಸಹೋದರಿಯರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದರ ಮೇಲೆ ನಾವು ಹೈಕೋರ್ಟಿಗೆ ಅಪೀಲು ಹೋಗಿರುತ್ತೇವೆ ಅಂತಾ ನುಡಿಯುತ್ತಾರೆ.

2. ಈ ಪ್ರಕರಣದಲ್ಲಿಯ ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ-3 ನೇ ಆಸ್ತಿಯು ಈ ಪ್ರಕರಣದ 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂತಾ ಓ ಎಸ ನಂಬರ 93/2015 ರಲ್ಲಿ ಉದ್ಘೋಷಣೆ ಆಗಿರುತ್ತದೆ ಎಂದರೆ ಸಾಕ್ಷಿ ಅದರ ಮೇಲೆ ಅಪೀಲು ಮಾಡಿದ್ದೇವೆ ಅಂತಾ ನುಡಿಯುತ್ತಾರೆ. ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ-3 ನೇ ಆಸ್ತಿಯ ಖರೀದಿ ಪತ್ರವನ್ನು ನಾನು ನೋಡಿದ್ದೇನೆ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯ ಖರೀದಿ ಕರಾರು ಪತ್ರವನ್ನು ನಾನು ಮೊದಲು ಮಾಡಿಸಿಕೊಂಡಿದ್ದೆ ಅಂತಾ ನುಡಿಯುತ್ತಾರೆ ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ -3 ನೇ ಆಸ್ತಿಯ ಕುರಿತು ನಾನೇ ನನ್ನ ಹೆಸರಿಗೆ ಖರೀದಿ ಸಂಚಕಾರ ಪತ್ರ ಮಾಡಿಸಿಕೊಂಡಿದ್ದು, ನನಗೆ ಹುಷಾರಿಲ್ಲದ್ದರಿಂದ ಖರೀದಿ ಪತ್ರ ಮಾಡಿಕೊಳ್ಳಲು ಸಬ್ ರಜಿಸ್ಟರ ಕಚೇರಿಗೆ ಹೋಗಲು ಆಗಲಿಲ್ಲ, ಹೀಗಾಗಿ 4 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಪತ್ರ ಆಗಿದ್ದು, ಅದರೆ ಖರೀದಿಯ ಎಲ್ಲ ಹಣವನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ -3 ನೇ ಆಸ್ತಗೆ ಸಂಬಂಧಿಸಿದ ಖರೀದಿಯ ಹಣವನ್ನು ನಾನೇ ಕೊಟ್ಟಿರುತ್ತೇನೆ ಅಂತಾ ಓ ಎಸ ನಂಬರ 93/2015 ರಲ್ಲಿ ಹೇಳಿಲ್ಲ ಎಂದರೆ ಸರಿ. ಖರೀದಿ ಕೊಟ್ಟವರ ಹೆಸರು ಪಂಚಯ್ಯ ಸಾಲಿಮಠ, ಶಂಕ್ರಯ್ಯ ಸಾಲಿಮಠ, ರೇಣುಕಯ್ಯ ಸಾಲಿಮಠ , ಜಯಮ್ಮ ಹಾಗೂ ನೀಲಮ್ಮ, ಖರೀದಿ ದಿನಾಂಕ ನೆನಪಿಲ್ಲ. ಖರೀದಿ ವ್ಯವಹಾರ ಎಷ್ಟು ಹಣಕ್ಕೆ ಆಯಿತು ಎಂದು ನೆನಪಿಲ್ಲ. 1,25,000/- ಹಣ ಕೊಟ್ಟು ನಾನು ಖರೀದಿ ಕರಾರು ಪತ್ರ ಮಾಡಿಸಿಕೊಂಡಿದ್ದೆ ಮತ್ತು ಅದು ನೋಂದಾಗಿತ್ತು. ಖರೀದಿ ಕರಾರು ಪತ್ರಕ್ಕೆ4 ನೇ ಪ್ರತಿವಾದಿಯೇ ಹಣ ಕೊಟ್ಟಿದ್ದ ಎಂದರೆ

ಸರಿಯಲ್ಲ.

3. ನನ್ನ ಹೆಸರಿಗೆ ಖರೀದಿ ಕರಾರು ಪತ್ರ ಆದ ಮೇಲೆ ಅದರ ರದ್ಧತಿ ಪತ್ರವೂ ಸಹಾ ಆಗಿರುತ್ತದೆ ಎಂದರೆ ಸಾಕ್ಷಿ ನಾನು ಖರೀದಿಯ ಸಲುವಾಗಿ ಎಲ್ಲ ಹಣವನ್ನು 4 ನೇ ಪ್ರತಿವಾದಿಯ ಕೈಗೆ ಕೊಟ್ಟಿದ್ದೆ, ಅದರ ಸಲುವಾಗಿ ಸಹಿ ಬೇಕು ಅಂತಾ ಹೇಳಿದ್ದರು, ನನಗೆ ಹುಷಾರಿಲ್ಲದ್ದ ಕಾರಣ, 4 ನೇ ಪ್ರತಿವಾದಿ ಎಲ್ಲ ಮುಗಿದಿದೆ ಅಂತಾ ಹೇಳಿ 4-00 ಗಂಟೆಗೆ ನನ್ನನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿಕೊಂಡಿರುತ್ತಾರೆ ಅಂತಾ ನುಡಿಯುತ್ತಾರೆ. ಖರೀದಿ ರದ್ಧತಿ ಪತ್ರ ನಿಡಿ-29 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ನನಗೆ ಖರೀದಿ ರದ್ಧತಿ ಪತ್ರ ಅಂತಾ ಗೊತ್ತಿರಲಿಲ್ಲ ಖರೀದಿ ಪತ್ರ ಅಂತಾ ಹೇಳಿ ನಂಬಿಸಿ , ಮೋಸ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ ಅಂತಾ ನುಡಿಯುತ್ತಾರೆ. ಸಾಕ್ಷಿಗೆ ನಿಡಿ-29 ರಲ್ಲಿರುವ ಸಹಿಗಳನ್ನು ತೋರಿಸಿ, ಈ ಸಹಿಗಳು ನಿಮ್ಮವಾ ಎಂದರೆ ಸಾಕ್ಷಿ ಹೌದು, ನನ್ನದು ಅಂತಾ ನುಡಿಯುತ್ತಾರೆ. ಸಾಕ್ಷಿ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನು ಕ್ರಮವಾಗಿ ನಿಡಿ-29(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಡಿ-29 ರಲ್ಲಿರುವ ಖರೀದಿ ಮಾಡಿಸಿಕೊಳ್ಳಲು ನನ್ನಿಂದ ಆಗದೇ ಇರುವ ಕಾರಣ, ಖರೀದಿ ಒಪ್ಪಂದ ಕರಾರು ಪತ್ರವನ್ನು ರದ್ದು ಮಾಡಿಕೊಳ್ಳುತ್ತಿದ್ದೇನೆ ಅಂತಾ ನಿಡಿ-29 ರಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-29 ಆದ ನಂತರ 4 ನೇ ಪ್ರತಿವಾದಿ ಎಲ್ಲ ಖರೀದಿ ಹಣವನ್ನು ಕೊಟ್ಟು ನಿಡಿ-30 ರಂತೆ ತನ್ನ ಹೆಸರಿಗೆ ಖರೀದಿ ಪತ್ರ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ ಸಂಚಕಾರ ಪತ್ರಕ್ಕಾಗಲಿ ಅಥವಾ ಖರೀದಿ ಪತ್ರಕ್ಕಾಗಲಿ ನಾನು ಯಾವುದೇ ಹಣ ಕೊಟ್ಟಿಲ್ಲ ಆದಾಗ್ಯೂ

ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಚಕಾರ ಪತ್ರ ಮಾಡಿಸಿಕೊಳ್ಳುವಾಗ ಮತ್ತು ಖರೀದಿ ಪತ್ರ ಮಾಡುವಾಗ ಹಣ ಕೊಟ್ಟಿದ್ದೇನೆ ಅಂತಾ ತೋರಿಸಲು ನನ್ನ ಬಳಿ ದಾಖಲಾತಿಗಳು ಇಲ್ಲ. ನಿಡಿ–28 ಮತ್ತು 30 ದಾಖಲಾತಿಗಳು ಆದ ಸಮಯಕ್ಕೆ ನನ್ನ ಬ್ಯಾಂಕ ಖಾತೆಯಲ್ಲಿ ಇಷ್ಟು ಹಣ ಇತ್ತು ಅಂತಾ ತೋರಿಸಲು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಬ್ಯಾಂಕ ಖಾತೆಯಲ್ಲಿ ಹಣ ಇರಲಿಲ್ಲ, ಸ್ವಂತಕ್ಕೆ ಮನೆಯಲ್ಲಿಟ್ಟುಕೊಂಡಿದ್ದೆ, ಹೀಗಾಗಿ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಅಂತಾ ನುಡಿಯುತ್ತಾರೆ.

4. ದಾವಾ ಶೆಡ್ಯೂಲ್–ಬಿ ಕ್ರಮ ಸಂಖ್ಯೆ–3 ನೇ ಆಸ್ತಿಯನ್ನು ಖರೀದಿ ಹಿಡಿಯುವ ಸಮಯಕ್ಕೆ 4 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಆಷ್ಟರ ಇಂಡಸ್ಟ್ರೀಜನಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಆ ಕಾಲಕ್ಕೆ 4 ನೇ ಪ್ರತಿವಾದಿಗೆ 28 ಸಾವಿರ ರೂ. ಸಂಬಳ ಇತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ನನಗೆ ಯಾವುದೇ ಹಣವನ್ನೂ ಸಹಾ ಅವನು ಕೊಟ್ಟಿಲ್ಲ ಅಂತಾ ನುಡಿಯುತ್ತಾರೆ. ನಿಡಿ–28 ನ್ನು ಮಾಡುವ ಸಮಯಕ್ಕೆ 4 ನೇ ಪ್ರತಿವಾದಿಗೆ ರಜೆ ಸಿಗಲಿಲ್ಲ, ಹೀಗಾಗಿ ಖರೀದಿ ಕರಾರು ಪತ್ರವನ್ನು ನನ್ನ ಹೆಸರಿಗೆ ಮಾಡಿಸಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಕ್ರಮ ಸಂಖ್ಯೆ–3 ನೇ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ, ನಾವು ಯಾರೂ ಅದಕ್ಕೆ ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ–29 ನ್ನು ಓದಿ, ನೋಡಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

5. ನಿಡಿ-102 ಮತ್ತು 103 ರಲ್ಲಿರುವ 4 ನೇ ಪ್ರತಿವಾದಿ ಅಂತಾ ತೋರಿಸಿರುವ ಸಹಿಗಳಲ್ಲಿ ವ್ಯತ್ಯಾಸಗಳು ಇವೆ ಎಂದರೆ ಸಾಕ್ಷಿ ಅವುಗಳನ್ನು 4 ನೇ ಪ್ರತಿವಾದಿಯೇ ಮಾಡಿರುತ್ತಾನೆ ಅಂತಾ ನುಡಿಯುತ್ತಾರೆ. 4 ನೇ ಪ್ರತಿವಾದಿ ನಿಡಿ-102 ಹಾಗೂ 103 ಕ್ಕೆ ಸಹಿ ಮಾಡಿಲ್ಲ, ಅವುಗಳನ್ನು ನಾನು ಖೊಟ್ಟಿ ರೀತಿಯಲ್ಲಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-102 ಮತ್ತು 103 ಮಾಡಿಕೊಳ್ಳುವ ಸಮಯಕ್ಕೆ 4 ನೇ ಪ್ರತಿವಾದಿ ಊರಿನಲ್ಲಿಯೇ ಇರಲಿಲ್ಲ, ಅವನ ಸಹಿಗಳನ್ನು ಖೊಟ್ಟಿ ರೀತಿಯಿಂದ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-102 ಮತ್ತು 103 ದಾಖಲಾತಿಗಳನ್ನು 4 ನೇ ಪ್ರತಿವಾದಿಗೆ ತಿಳಿಯದಂತೆ ನಾನು ಖೊಟ್ಟಿ ರೀತಿಯಿಂದ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-102 ಮತ್ತು 103 ರ ಆಧಾರದ ಮೇಲೆ ಮಾಡಿಕೊಂಡಿರುವ ಡ ನಂಬರ 14/2015-16 ನೇದ್ದನ್ನು ರದ್ದುಪಡಿಸುವಂತೆ ಹಾವೇರಿಯ ಉಪವಿಭಾಗಾಧಿಕಾರಿಯವರ ಕಚೇರಿಗೆ ಆರ್.ಟಿ.ಎಸ್ ಎ ಪಿ 41/2016-17 ರಂತೆ 4 ನೇ ಪ್ರತಿವಾದಿ ಅಪೀಲು ಮಾಡಿದ್ದರು ಎಂದರೆ ಗೊತ್ತಿಲ್ಲ. ಆರ್.ಟಿ.ಎಸ್ ಎ ಪಿ 41/2016-17 ರಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ಆರ್.ಟಿ.ಎಸ್ ಎ ಪಿ 41/2016-17 ಪುರಸ್ಕಾರಗೊಂಡು ಡ ನಂಬರ 14/2015-16 ನ್ನು ರದ್ದುಪಡಿಸಿ ಆದೇಶ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಆರ್.ಟಿ.ಎಸ್ ಎ ಪಿ 41/2016-17 ನೇದ್ದರ ಆದೇಶದ ಮೇಲೆ ನಾನು ಯಾವುದೇ ಅಪೀಲು ಮಾಡಿಲ್ಲ ಎಂದರೆ ಸಾಕ್ಷಿ ಆರ್.ಟಿ.ಎಸ್. ಪ್ರಕರಣದ

ಬಗ್ಗೆಯೇ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಕ್ರಮ ಸಂಖ್ಯೆ -3 ನೇ ಆಸ್ತಿಯು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇದ್ದುದರಿಂದಲೇ ನಾನು ಯಾವುದೇ ಅಪೀಲು ಮಾಡಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ3 ಮತ್ತು 6 ನೇ ಆಸ್ತಿಗಳು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ -3 ಮತ್ತು 6 ನೇ ಆಸ್ತಿಗಳು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಿದ್ದರೂ ಸಹಾ ಅವುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಕ್ರಮಸಂಖ್ಯೆ -6 ನೇ ಆಸ್ತಿಯನ್ನು ನಾನು ನೋಡಿದ್ದೇನೆ. ಕ್ರಮಸಂಖ್ಯೆ 6 ನೇ ಆಸ್ತಿ ಧಾರವಾಡದ ಯುನಿವರ್ಸಿಟಿ ರಸ್ತೆಯ ಮುಂದೆ ಬಲಭಾಗದಲ್ಲಿ ಬರುತ್ತದೆ, ಸರಿಯಾಗಿ ವಿಳಾಸ ಹೇಳಲು ಬರುವುದಿಲ್ಲ. ಮನೆ ಕಟ್ಟುವುದಕ್ಕಿಂತ ಮೊದಲು ಸೈಟನ್ನು 2010 ರಲ್ಲಿ 4 ನೇ ಪ್ರತಿವಾದಿ ಖರೀದಿ ಮಾಡಿದ್ದರು. ಸದರಿ ಸೈಟನ್ನು ಯಾವಾಗ, ಯಾರಿಂದ ಮತ್ತು ಎಷ್ಟುಹಣಕ್ಕೆ 4 ನೇ ಪ್ರತಿವಾದಿ ಖರೀದಿ ಮಾಡಿದ್ದ ಅಂತಾ ನನಗೆ ಗೊತ್ತಿಲ್ಲ. 2011 ರಲ್ಲಿ ರೂ. 8 ಲಕ್ಷ ಕೊಟ್ಟು 4 ನೇ ಪ್ರತಿವಾದಿ ವೆಂಕರೆಡ್ಡಿ ಹನುಮರೆಡ್ಡಿ ಕೋನರೆಡ್ಡಿಯವರಿಂದ ಸೈಟನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಖರೀದಿ ಮಾಡಿದ್ದು ನಿಜ, ಆದರೆ ವರ್ಷ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಸದರಿ ಸೈಟನ್ನು ಖರೀದಿ ಮಾಡುವ ಸಲುವಾಗಿ 4 ನೇ ಪ್ರತಿವಾದಿ ಧಾರವಾಡದ ಎಸಬಿಐ ಬ್ಯಾಂಕಿನಲ್ಲಿ 6 ಲಕ್ಷ 90 ಸಾವಿರ ರೂ. ಸಾಲ ಮಾಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ರಾಣೆಬೆನ್ನೂರಿನ ರಾಜೇಶ್ವರಿ ನಗರದಲ್ಲಿರುವ ಸೈಟನ್ನು ಮಾರಾಟ ಮಾಡಿ 4 ನೇ ಪ್ರತಿವಾದಿ ಧಾರವಾಡದಲ್ಲಿ ಸೈಟು ಹಿಡಿದ್ದ ಅಂತಾ

ನುಡಿಯುತ್ತಾರೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

7. 4 ನೇ ಪ್ರತಿವಾದಿ ಕ್ರಮ ಸಂಖ್ಯೆ -6 ನೇ ಆಸ್ತಿ ಮನೆಯನ್ನು ಯಾವಾಗ ಕಟ್ಟಿರುತ್ತಾನೆ ಅಂತಾ ನನಗೆ ಗೊತ್ತಿಲ್ಲ. ಮನೆ ಕಟ್ಟಲು ಎಷ್ಟು ಖರ್ಚು ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಮನೆ ಕಟ್ಟಲು 4 ನೇ ಪ್ರತಿವಾದಿ ಅದೇ ಎಸಬಿಐ ಬ್ಯಾಂಕಿನಲ್ಲಿ 20 ಲಕ್ಷ 53 ಸಾವಿರ ರೂ. ಹೌಸಿಂಗ್ ಲೋನ ಪಡೆದಿದ್ದರು ಎಂದರೆ ಸರಿಯಲ್ಲ. ಸೈಟು ಹಾಗೂ ಮನೆ ಕಟ್ಟಲು 4 ನೇ ಪ್ರತಿವಾದಿ ಒಟ್ಟು 27,43,000/- ಎಸಬಿಐ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ. ನಾನಾಗಲಿ ಅಥವಾ ಉಳಿದ ಪ್ರತಿವಾದಿಯರ ಅಥವಾ ವಾದಿಯಾಗಲಿ 4 ನೇ ಪ್ರತಿವಾದಿಗೆ ಸೈಟು ಹಾಗೂ ಮನೆ ಕಟ್ಟಲು ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳ ಉತ್ಪನ್ನಗಳ ಆದಾಯದಿಂದ 4 ನೇ ಪ್ರತಿವಾದಿ ಕ್ರಮ ಸಂಖ್ಯೆ -6 ನೇ ಆಸ್ತಿಯನ್ನು ಖರೀದಿ ಮಾಡಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ತನ್ನ ಮನೆತನದ ಅಡಚಣೆಯ ಸಲುವಾಗಿ ಮತ್ತು ಸಾಲ ತೀರಿಸುವ ಸಲುವಾಗಿ ಕ್ರಮ ಸಂಖ್ಯೆ -6 ನೇ ಆಸ್ತಿಯನ್ನು 7 ನೇ ಪ್ರತಿವಾದಿಗೆ ದಿನಾಂಕ 23-05-2018 ರಂದು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯ ಮೂಲಕ ಈ ಸುಳ್ಳು ದಾವೆಯನ್ನು ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 3 ಮತ್ತು 6 ನೇ ಆಸ್ತಿಗಳು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವುಗಳಲ್ಲಿ ಯಾರಿಗೂ ಸಹಾ ಹಕ್ಕು ಇಲ್ಲ

ಅಂತಾ ಗೊತ್ತಿದ್ದರೂ ಸಹಾ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಮಸಂಖ್ಯೆ3 ಮತ್ತು 6 ನೇ ಆಸ್ತಿಗಳಲ್ಲಿ ನನಗಾಗಲಿ, ವಾದಿಗಾಗಲಿ ಅಥವಾ 2, 3, ಮತ್ತು 6 ನೇ ಪ್ರತಿವಾದಿಗಳಿಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 7 ನೇ ಪ್ರತಿವಾದಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದ

**ಈ ಸಮಯದಲ್ಲಿ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.